**ಮರಾಠಿ ಮೂಲ: ಲಕ್ಷ್ಮಣರಾವ್ ಸರ್‌ದೇಸಾಯಿ**
**ಕನ್ನಡಕ್ಕೆ: ಶಾ.ಮಂ. ಕೃಷ್ಣರಾಯ**

ಕಲೆ: ವೆಂಕಟ್ರಮಣ ಭಟ್

# ಮೊಹರು

ಐವತ್ತು ವರ್ಷಗಳ ಹಿಂದಿನ ಮಾತು.

ಮನೆಯಿಂದ ಹೊರಬೀಳುವ ಮುನ್ನ ನಾರಾಯಣರಾಯರು ದೇವರ ಕೋಣೆಗೆ ಹೋಗಿ ದೇವರಿಗೆ ಸಾಷ್ಟಾಂಗವೆಸಗಿದರು. ಲಕ್ಷ್ಮೀಬಾಯಿಯೂ ಗಂಡನನ್ನು ಅನುಸರಿಸಿದಳು. ಇಬ್ಬರ ಕಣ್ಣಲ್ಲೂ ನೀರು ಹನಿಯುತ್ತಿತ್ತು. ತೆಂಗಿನಕಾಯಿಯನ್ನು ದೇವರ ಅಡಿದಾವರೆಗಳಲ್ಲಿಟ್ಟು ಹಣೆಗೆ ವಿಭೂತಿ ಹಚ್ಚಿಕೊಂಡರು. ನಿರ್ಮಾಲ್ಯ ಹೂವಿನೆಸಳುಗಳನ್ನು ಎತ್ತಿ ಕೋಟಿನ ಜೇಬಿಗೆ ತುರುಕಿಸಿಕೊಂಡರು.

'ದೇವಿ ಶಾಂತಾಯಿ ಈ ಬಾರಿಯಾದರೂ ಹೋದ ಕೆಲಸ ಯಶಸ್ವಿಯಾಗುವಂತೆ ಮಾಡಿ ಕಾಪಾಡು, ಮನೆತನದ ಮರ್ಯಾದೆ ಉಳಿಯುವಂತೆ ಮಾಡು' ಎಂದು ಲಕ್ಷ್ಮೀಬಾಯಿ ದೈನ್ಯದಿಂದ ದೇವರಲ್ಲಿ ಪ್ರಾರ್ಥಿಸಿದಳು.

ದೇವರ ಕೋಣೆಯಿಂದ ಹೊರ ಬಂದ ನಾರಾಯಣರಾಯರು ಕಪಾಟಿನ ಬಾಗಿಲು ತೆರೆದು ಬೆಳ್ಳಿಯ ಕರಂಡಕದಲ್ಲಿಟ್ಟ ಚಿನ್ನದ ಮೊಹರು ಹೊರತೆಗೆದು ಅಂಗೈಯಲ್ಲಿಟ್ಟುಕೊಂಡು ಆ ಕರಂಡಕವನ್ನು ಮೊದಲಿದ್ದ ಸ್ಥಳದಲ್ಲಿಟ್ಟು ಅಲಮಾರಿನ ಬಾಗಿಲು ಮುಚ್ಚಿ ಕೈಯಲ್ಲಿದ್ದ ಮೊಹರನ್ನು ಅತೀವ ಶ್ರದ್ಧೆ ಭಕ್ತಿಗಳಿಂದ ನೋಡತೊಡಗಿದರು.

ಅದು ಅವರ ಮನೆತನಕ್ಕೆ ತಲೆತಲಾಂತರದಿಂದ ಬಂದ ಪವಿತ್ರ ಆಸ್ತಿಯಾಗಿತ್ತು, ಪರಂಪರೆಯ ಸಂಕೇತವಾಗಿತ್ತು. ನಾರಾಯಣರಾಯರ ತಂದೆ ತಮ್ಮ ಅಂತ್ಯಾವಸ್ಥೆಯಲ್ಲಿ ರಾಯರನ್ನು ಹತ್ತಿರ ಕರೆದು ಕೂಡಿಸಿಕೊಂಡು ತಲೆದಿಂಬಿನಡಿಯಲ್ಲಿದ್ದ ಈ ಮೊಹರು ಕೈಯಲ್ಲಿಟ್ಟು 'ಇದು ನಮ್ಮ ಮನೆತನದ ಲಕ್ಷ್ಮಿ. ಎಂಥ ಆಪತ್ತು ಬಂದರೂ ಇದನ್ನು ಕೈಬಿಡದೆ ಸತ್ಕಾರ್ಯಕ್ಕೆ ಹೊರಡುವಾಗ ನಿನ್ನ ಬಳಿ ಇಟ್ಟುಕೋ, ಎಲ್ಲಿಯೂ ಕಳೆದು ಹೋಗದಂತೆ ಎಚ್ಚರ ವಹಿಸು' ಎಂದಿದ್ದರು.

ಈಗ ಈ ಮೊಹರು ನೋಡುತ್ತಿದ್ದಂತೆ ಅವರ ಕಣ್ಣುಗಳು ತೇವಗೊಂಡವು. ಎಷ್ಟೊಂದು ಪುಣ್ಯ ಪುರುಷರ ಅಮೃತಹಸ್ತದಿಂದ ಇದು ಪುನೀತಗೊಂಡಿದೆ. ನೂರಾರು ವರ್ಷಗಳಿಂದ ಒಬ್ಬರ ಕೈಯಿಂದ ಇನ್ನೊಬ್ಬರ ಕೈಗೆ ಜಾರುತ್ತ ಬಂದಿರುವುದರಿಂದ ಅದರ ಒಂದು ಮುಖ ಮಸಕು ಮಸಕಾಗಿತ್ತು. ಇದೊಂದು ಶ್ರದ್ಧಾಶೀಲ ಪರಂಪರೆಯ ಪ್ರತೀಕವಾಗಿತ್ತು. ಅವರು ಮತ್ತೊಮ್ಮೆ ತಮ್ಮ ಕುಲದೇವತೆಗೆ ಕೈಮುಗಿದು ಪಂಚೆಯ ಅಂಚಿಗೆ ಕಟ್ಟಿ ಸೊಂಟಕ್ಕೆ ಸಿಕ್ಕಿಸಿಕೊಂಡರು. ಪಕ್ಕದಲ್ಲಿ ನಿಂತ ಲಕ್ಷ್ಮೀಬಾಯಿಯನ್ನು ಅರ್ಥಗರ್ಭಿತವಾಗಿ ನೋಡಿದರು. ಅವರನ್ನು ಸುತ್ತಿಕೊಂಡ ಕಷ್ಟ ಕೋಟಲೆಗಳ ಅಂಧಃಕಾರದಲ್ಲಿ ಬಾಳಿನಾಸರೆಯಾಗಿ

